ಬಿ) ಹುಳಿಯೂರ್ ಬಾಣಾವಾರ ರಸ್ತೆ : ದೊರಕುತ್ತಿರುವ ವಾರ್ಷಿಕ ಅನುದಾನದಲ್ಲಿ ದುರಸ್ತಿ ಕೆಲಸಗಳನ್ನು ಕೈಗೊಂಡು ರಸ್ತೆಯನ್ನು ಸುಸ್ಥಿತಿಯಡಲು ಪ್ರಯತ್ನಿಸಲಾಗುತ್ತಿದೆ.

೧೯೮೬-೮೭ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ನಮೂದಿಸಿರುವ ಏತ ನೀರಾವರಿ ಯೋಜನೆಗಳ ಬಗ್ಗೆ

೧೪ (೧೯೨) ಶ್ರೀ ಕೆ. ಬಿ. ಕೋಳಿವಾಡ (ರಾಣೆ ಬೆನ್ನೂರು).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಎ) ೧೯೮೬-೮೭ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಕಾಣಿಸಲಾದ ಏತಾ ನೀರಾವರಿ ಯೋಜನೆಗಳಲ್ಲಿಯೇ ಮೆಡ್ಲೇರಿ ಏತಾ ನೀರಾವರಿ ಯೋಜನೆಗೆ ಆದ್ಯತೆ ಕೊಟ್ಟು ಪ್ರಾರಂಭಿಸಲು ಸ್ಥಳೀಯ ಶಾಸಕರು ಮನವಿ ಸಲ್ಲಿಸಿರುವರೇ ?

ಬಿ) ಹಾಗಿದ್ದಲ್ಲಿ, ಸದರಿ ಕಾರ್ಯಕ್ರಮವು ಇನ್ನೂ ಏಕೆ ಪ್ರಾರಂಭಗೊಂಡಿಲ್ಲ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಮತ್ತು ನೀರಾವರಿ ಮಂತ್ರಿಗಳು).—

ಎ) ಹೌದು.

ಬಿ) ಈ ಕಾಮಗಾರಿಯು ೧೯೮೬-೮೭ರ ಆಯವ್ಯಯದಲ್ಲಿ ಕೈಬಿಡಲ್ಪಟ್ಟಿದ್ದು ೫೦,೦೦೦ ರೂ. ಗಳ ಅನುದಾನವನ್ನು ಪಡೆದಿದೆ. ಈ ಕಾಮಗಾರಿಯ ಅಂದಾಜು ಪಟ್ಟಿಯು ತಯಾರಾಗುತ್ತಿದ್ದು, ಈ ಕೆಲಸವು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಕಾರ್ಯಸಾಧುವೆಂದು ಕಂಡು ಬಂದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ವಯಸ್ಕರ ಶಿಕ್ಷಣ ಪದ್ಧತಿಯನ್ನು ಜನಪ್ರಿಯಗೊಳಿಸುವ ಬಗ್ಗೆ

೧೫ (೨೧೧ಎ) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಎ) 'ವಯಸ್ಕರ ಶಿಕ್ಷಣ' ಸರ್ಕಾರದ ಅಪೇಕ್ಷೆಗೆ ತಕ್ಕಂತೆ ಫಲಪ್ರದವಾಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಬಿ) ಈ ಯೋಜನೆಯನ್ನು ಇನ್ನೂ ಹೆಚ್ಚು ಫಲಪ್ರದಗೊಳಿಸಲು ಸರ್ಕಾರದವರು ಬೇರೆ ಏನಾದರೂ ಹೆಚ್ಚಿನ ಸೌಲಭ್ಯ ಅಲ್ಲಿಯ ಶಿಕ್ಷಕ ಶಿಕ್ಷಕಿಯರಿಗೆ ಕೊಡಲು ಯೋಜಿಸಿದ್ದಾರೆಯೆ ?

ಇ) ಅನಕ್ಷರಸ್ಥರನ್ನು ಈ ಯೋಜನೆಯಡಿಯಲ್ಲಿ ತರಲು ಹೊಸ ಪ್ರಯತ್ನ ಏನಾದರೂ ನಡೆದಿದೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಎ) ಇಲ್ಲ.

ಬಿ) ಇಲ್ಲ.

ಇ) ನಡೆದಿದೆ.

ಗ್ಯಾಂಗ್ ಕೂಲಿಗಾರರ ವೇತನ ಪುನರ್ ವಿವಂರ್ಶೆ ಬಗ್ಗೆ

೧೫ (೨೧೧) ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಎ) ರಾಜ್ಯದಲ್ಲಿ ಗ್ಯಾಂಗ್ ಕೂಲಿಗಾರರು ಮತ್ತಿತರ ಕಾರ್ಮಿಕರಿಗೆ ಕೊಡುತ್ತಿರುವ ಕನಿಷ್ಠ ವೇತನುಕೂಲಿ) ಎಷ್ಟು ?